# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಲಮಟ್ಟಿ ಜಲಾಶಯದ ಪವರ್ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ ರಾಜಧನವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಂದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರಿಗೆ ಪಾವತಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ನೀಇ 41 ಕೆಬಿಎನ್ 1995, ದಿನಾಂಕ: 31.08.1995.

2) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: KBJNL/EDF/KPCL/Water Royalty/2011-12/689, ದಿನಾಂಕ: 11.11.2015.

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ದಿನಾಂಕ: 20.07.2018.

*****

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಆಲಮಟ್ಟಿ ಜಲಾಶಯದ ಪವರ್ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ ರಾಜಧನವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಂದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರಿಗೆ ಪ್ರತಿ ಯೂನಿಟ್ ವಿದ್ಯುತ್ ಉತ್ಪಾದನೆಗೆ ರೂ.1.00ರಂತೆ ಪಾವತಿಸಲು ನಿಗಧಿಪಡಿಸಿ ಆದೇಶಿಸಲಾಗಿದೆ.

ಆಲಮಟ್ಟಿ ಜಲಾಶಯದಲ್ಲಿ ಕೆಪಿಸಿಎಲ್ ರವರು 290 ಮೆ ವ್ಯಾ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯದ ವಿದ್ಯುದಾಗಾರವನ್ನು (Dam power house) ಸ್ಥಾಪಿಸಿದ್ದು ಪೆನ್‌ಸ್ಟಾಕ್‌ಗಳ ಮೂಲಕ ಬಿಡುಗಡೆಯಾದ ನೀರನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಿದೆ. ಇಂಧನ ಇಲಾಖೆಯು ಈಗಾಗಲೇ ಸರ್ಕಾರದ ಆದೇಶದಂತೆ ನಿಗದಿಪಡಿಸಿದ ರೂ. 1.00ರಂತೆ ಪ್ರತಿ ಯುನಿಟ್‌ಗೆ ರಾಜಧನವನ್ನು ಇಲ್ಲಿಯವರೆಗೂ ಪಾವತಿಸಿರುವುದಿಲ್ಲ. ಕೆಪಿಸಿಎಲ್ 06.05.2004 ಪತ್ರದಲ್ಲಿ ಕೆಪಿಸಿಎಲ್‌ನ ನಿರ್ದೇಶಕ ಮಂಡಳಿಯು ಪ್ರತಿ ಯೂನಿಟ್‌ಗೆ ರೂ.0.50 ಪಾವತಿಸಲು ಒಪ್ಪಿದ್ದು, ಈ ದರವನ್ನು 25.02.2005ರಲ್ಲಿ ನಡೆದ ಕೃಷ್ಣ ಭಾಗ್ಯ ಜಲ ನಿಗಮದ 59ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ರೂ.0.51 ಪ್ರತಿ ಯೂನಿಟ್ ರಾಜಧನವನ್ನು ಪಾವತಿಸಿಕೊಳ್ಳಲು ಅನುಮೋದಿಸಲಾಗಿರುತ್ತದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 19.01.2010ರಲ್ಲಿ ಸಭೆಯನ್ನು ನಡೆಸಿದ್ದು ಸುದೀರ್ಘ ಚರ್ಚೆಯ ನಂತರ ಮಾರ್ಚ್ 2010ರ ವರೆಗೆ ಪ್ರತಿ ಯೂನಿಟ್‌ಗೆ 4 ಪೈಸೆ ಹಾಗೂ ತದನಂತರ ಪ್ರತಿ ಯೂನಿಟ್‌ಗೆ 10 ಪೈಸೆ ಪಾವತಿಸುವಂತೆ ನಿರ್ಣಯಿಸಲಾಗಿರುತ್ತದೆ. ಅದರಂತೆ ಇಂಧನ ಇಲಾಖೆಯು ಪ್ರತಿ ಯೂನಿಟ್‌ಗೆ 10 ಪೈಸೆಯಂತೆ ಇಲ್ಲಿಯವರೆಗೂ ಪ್ರತಿ ವರ್ಷವು ಪಾವತಿಸುತ್ತಾ ಬಂದಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ಆಲಮಟ್ಟಿ ಜಲಾಶಯದ ಪವರ್ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ

...2

ರಾಜಧನವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಂದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರಿಗೆ ಪ್ರತಿ ಯೂನಿಟ್‌ಗೆ 10 ಪೈಸೆಯಿಂದ 51 ಪೈಸೆಯಂತೆ ಪಾವತಿಸಲು ಸರ್ಕಾರದ ಹಂತದಲ್ಲಿ ನಿರ್ಣಯಿಸಬೇಕೆಂದು ಪ್ರಸ್ತಾವನೆಯನ್ನು ದಿನಾಂಕ:11.11.2015ರಂದು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 20.07.2018ರಂದು ಜಲ ಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಮತ್ತು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕರುಗಳ ಜೊತೆ ಸಭೆ ನಡೆಸಿ, ಈ ಹಿಂದೆ ಹೊರಡಿಸಲಾದ ಸರ್ಕಾರದ ಆದೇಶ ದಿನಾಂಕ 31.08.1995ರಂತೆ ಆಲಮಟ್ಟಿ ಜಲಾಶಯದ ಪವರ್ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ರೂ.1.00ರಂತೆ ರಾಜಧನವನ್ನು ಭವಿಷ್ಯ ಅನ್ವಯವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ರವರು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಪಾವತಿಸಲು ಕ್ರಮ ಜರುಗಿಸುವಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಇಂಧನ ಇಲಾಖೆಯು ಟಿಪ್ಪಣಿ ಸಂಖ್ಯೆ: EN/ACS/2720/2018 ದಿನಾಂಕ:10.10.2018ರಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

"ಆಲಮಟ್ಟಿ ಜಲಾಶಯ ಪವರ ಹೌಸನಿಂದ ಉತ್ಪಾದನೆಯಾಗುವ ವಿದ್ಯುತ್ ಪ್ರತಿ ಯೂನಿಟ್‌ಗೆ ರೂ. 1.00 ರಂತೆ ರಾಜಧನವನ್ನು ಕೆ.ಬಿ.ಜೆ.ಎನ್.ಎಲ್.ಗೆ ನೀಡುವಂತೆ ನೀರಾವರಿ ಇಲಾಖೆಯು 1995 ರಲ್ಲಿ ಆದೇಶ ನೀಡಿದೆ. ಆದರೆ ಕೆ.ಪಿ.ಸಿ.ಎಲ್. ಮಾಚ್-2010 ರವರೆಗೆ 4 ಪೈಸೆಯಂತೆ ತದನಂತರ 10 ಪೈಸೆಯಂತೆ ಪ್ರತಿ ಯೂನಿಟ್‌ಗೆ ರಾಜಧನವನ್ನು ನೀಡಲಾಗಿರುತ್ತದೆ. ಆಲಮಟ್ಟಿ ಜಲಾಶಯ ಪವರ ಹೌಸ್‌ನ ಸರಾಸರಿ ವಿದ್ಯುತ್ ಉತ್ಪಾದನೆ 452 ದಶಲಕ್ಷ ಯೂನಿಟ್ ಆಗಿದ್ದು, ಇದರಂತೆ ರೂ. 4.52 ಕೋಟಿ ಹಣವನ್ನು ಕೆ.ಬಿ.ಜೆ.ಎನ್.ಎಲ್‌ಗೆ ಪಾವತಿಸಲಾಗುತ್ತಿದೆ. ಈಗ ನೀರಾವರಿ ಇಲಾಖೆಯು ಪ್ರಸ್ತಾಪಿಸಿರುವ ರಾಜಧನವನ್ನು ರೂ. 1 ಗೆ ಪ್ರತಿ ಯೂನಿಟ್‌ಗೆ ಏರಿಸಿದರೆ, ಅಂದರೆ 10 ಪಟ್ಟು ಏರಿಕೆ ಆದರೆ ರಾಜಧನವನ್ನು 10 ಪಟ್ಟು ಅಂದರೆ ರೂ. 45.20 ಕೋಟಿ ನೀಡಬೇಕಾಗುತ್ತದೆ. ಮತ್ತು ಆಲಮಟ್ಟಿ ಜಲಾಶಯ ಪವರ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ನ ದರವು ರೂ. 1 ರಂತೆ ಏರಿಕೆ ಆಗುತ್ತದೆ. ಇದು ಗ್ರಾಹಕರ ಮೇಲೆ ಹೊರೆ ಬೀಳಲಿದೆ. ಇಂತಹ ಸನ್ನಿವೇಶದಲ್ಲಿ ರಾಜಧನವನ್ನು 10 ಪಟ್ಟು ಏರಿಸುವುದು ಸಮಂಜಸವಾದುದಲ್ಲ".

ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 415 ಆಕೋ-1/2017, ದಿನಾಂಕ: 16.08.2017ರಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

"ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸರ್ಕಾರದ ಆದೇಶ ಸಂಖ್ಯೆ: ನೀಇ 41 ಕೆಬಿಎನ್1995, ದಿನಾಂಕ 31.08.1995ರಲ್ಲಿ (ಆರ್ಥಿಕ ಇಲಾಖೆಯ ಅಟಿ ಸಂಖ್ಯೆ: ಲೋಇ 462 ಆಕೋ-1/1995, ದಿನಾಂಕ 23.08.1995)ರಂತೆ ರಾಜಧನವನ್ನು ರೂ.1.00ಕ್ಕೆ ನಿಗದಿಪಡಿಸಿದ್ದು, ಅದರಂತೆ ವಸೂಲು ಮಾಡಲು ಜಲ ಸಂಪನ್ಮೂಲ ಇಲಾಖೆಯ ಹಂತದಲ್ಲಿಯೇ ಕ್ರಮ ವಹಿಸಲು ತಿಳಿಸಲಾಗಿದೆ".

ಕೃಷ್ಣಾ ಭಾಗ್ಯ ಜಲ ನಿಗಮ ಮಾರುಕಟ್ಟೆ ಸಾಲಗಳನ್ನು ಪಡೆದುಕೊಂಡು ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಸಾಲ ಪ್ರಸ್ತಾವನೆಗಳಲ್ಲಿ ಆದಾಯದ ಮೂಲಗಳನ್ನು ತೋರಿಸಲು ಹಾಗೂ ಏತ ನೀರಾವರಿ ಯೋಜನೆಗಳಲ್ಲಿ ಬಳಸುವ ವಿದ್ಯುಚ್ಛಕ್ತಿಗೆ, ಅಣೆಕಟ್ಟು ರಿಪೇರಿ ಮತ್ತು ಪಾಲನೆಗೆ ತಗಲುವ ವೆಚ್ಚಗಳನ್ನು ಸರಿದೂಗಿಸಲು ನಿಗಮಕ್ಕೆ ರಾಜಧನವನ್ನು ಕೆಪಿಸಿಎಲ್ ಭರಿಸುವುದು ಅತ್ಯವಶ್ಯಕವಾಗಿದೆ. ಕೆಪಿಟಿಸಿಎಲ್ ಲೆವೆಲೈಸ್ಡ್ ತರೀಫ್‌ನ್ನು ವಿಧಿಸುವುದರಿಂದ ವಿದ್ಯುಚ್ಛಕ್ತಿಯ ದರದ ಮೇಲೆ ಅಧಿಕ ಹೊರೆಯಾಗುವುದಿಲ್ಲ. ಆದುದರಿಂದ ಈಗಾಗಲೆ ಸರ್ಕಾರದ ಆದೇಶದಂತೆ ನಿಗದಿಪಡಿಸಿರುವ ಪ್ರತಿ ಯೂನಿಟ್‌ಗೆ ರೂ.1.00ರಂತೆ ರಾಜಧನವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ರವರು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಪಾವತಿಸಬೇಕಾಗಿರುತ್ತದೆ.

ಆದ್ದರಿಂದ, ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 325 ಕೆಬಿಎನ್ 2015, ಬೆಂಗಳೂರು, ದಿನಾಂಕ: 02.03.2019**

ಆಲಮಟ್ಟಿ ಜಲಾಶಯದ ಪವರ್ ಹೌಸ್‌ನಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ ರಾಜಧನವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಂದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರಿಗೆ ಈ ಹಿಂದೆ ಮಾಡಲಾದ ಸರ್ಕಾರದ ಆದೇಶ ದಿನಾಂಕ 31.08.1995ರಂತೆ ಪ್ರತಿ ಯೂನಿಟ್‌ಗೆ ರೂ.1.00ರಂತೆ ರಾಜಧನವನ್ನು ತಕ್ಷಣದಿಂದ ಅನ್ವಯವಾಗಿ ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 415 ಆಕೋ-1/2017, ದಿನಾಂಕ:16.08.2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B 02/03/19

(ಬಿ.ಹರಿನಾರಾಯಣ),
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ.

( ಬಿ. ಹರಿನಾರಾಯಣ )
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ
ಕೊಠಡಿ ಸಂಖ್ಯೆ: 316, 3ನೇ ಮಹಡಿ
ವಿಕಾಸಸೌಧ, ಬೆಂಗಳೂರು - 560 001

02/03/2019.

ಇವರಿಗೆ:-

1. ಮಹಾಲೇಖಪಾಲರು, (ಎ&ಇ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಮಗ ನಿಯಮಿತ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಕೃಭಾಜನಿನಿ, ಅಣೆಕಟ್ಟು ವಲಯ, ಆಲಮಟ್ಟಿ.
7. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಇಂಧನ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ ಜಲಸಂಪನ್ಮೂಲ ಇಲಾಖೆ.
10. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ.

11. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ: ಸಿ:681/2019, ದಿನಾಂಕ; 25.02.2019 ರಂತೆ ಮಾಹಿತಿಗಾಗಿ)
12. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ- ಕಟ್ಟಡ, ಬೆಂಗಳೂರು.
13. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಇ-ಅಕೋ), ವಿಧಾನಸೌಧ, ಬೆಂಗಳೂರು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.